

## ಹಾರ್ನ್‌ಬಿಲ್ ಹವಾ..!

ದಾಂಡೇಲಿ ಎಂದರೆ ನಮಗೆ ನೆನಪಾಗುವುದು ಹರಿಯುವ ಕಾಳಿ ನದಿ, ಸಾಹಸಮಯ ಜಲಕ್ರೀಡೆಗಳು, ಜಂಗಲ್ ರೆಸಾರ್ಟ್ ಮತ್ತು ಕಾಗದ ಕಾರ್ಖಾನೆಗಳು. ಮಲೆನಾಡ ಸೆರಗಿನಂತಿರುವ ದಾಂಡೇಲಿ ಅರಣ್ಯ ಪ್ರದೇಶವು ತನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳಲು ಇಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಹಾರ್ನ್‌ಬಿಲ್ ಪಕ್ಷಿಗಳ ಪಾತ್ರ ಗಮನಾರ್ಹವಾದದ್ದು. ಹೀಗಾಗಿಯೇ ಇಲ್ಲಿ ಸಾಂಕೇತಿಕವಾಗಿ ಹಾರ್ನ್‌ಬಿಲ್ ಪಕ್ಷಿಯ ಬೃಹತ್ ಪ್ರತಿಕೃತಿಯನ್ನು ಸ್ಥಾಪಿಸಲಾಗಿದೆ. ಅದರ ಚಿತ್ರವೇ ಇದು. ಈ ಪಕ್ಷಿಗಳು ಮರಗಳಲ್ಲಿನ ಹಣ್ಣುಗಳನ್ನು ತಿನ್ನುತ್ತ ಬೀಜ ಪ್ರಸರಣ ಕಾರ್ಯ ನಿರಂತರವಾಗಿ ಮಾಡುತ್ತವೆ. ಆದ್ದರಿಂದಲೇ, 'ಈ ಪಕ್ಷಿಗಳಿದ್ದಲ್ಲಿ ಸಹಜವಾಗಿ ವನ ಸಂಪತ್ತು ಯಥೇಚ್ಛವಾಗಿ ಬೆಳೆಯುತ್ತದೆ. ಹಾರ್ನ್‌ಬಿಲ್ ಪಕ್ಷಿ ಸಂಕುಲ ಇಲ್ಲವೆಂದರೆ, ಇಲ್ಲಿ ಕಾಡು ಸಹ ಇರುವುದಿಲ್ಲ' ಎಂಬ ಮಾತು ಈ ಹಕ್ಕಿಗಳ ಹೆಚ್ಚುಗಾರಿಕೆಯನ್ನು ತಿಳಿಸುತ್ತದೆ. ಅರಣ್ಯವೃದ್ಧಿಗೆ ವರದಾನವಾದ ಈ ಹಾರ್ನ್‌ಬಿಲ್ ಪಕ್ಷಿ ಸಂತತಿ ರಕ್ಷಿಸಲೆಂದೇ ನಮ್ಮ ರಾಜ್ಯ ಸರ್ಕಾರ ದಾಂಡೇಲಿ ಪ್ರದೇಶವನ್ನು ಹಾರ್ನ್ ಬಿಲ್ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಿ, ಅವುಗಳ ರಕ್ಷಣೆಗೆ ಬೆನ್ನಾಗಿ ನಿಂತಿದೆ. ಕಾಳಿ ನದಿಯಂಚಿನಲ್ಲಿ ಅಪರೂಪದ ವರ್ಣರಂಜಿತ ಹಾರ್ನ್‌ಬಿಲ್‌ಗಳ ಧ್ವನಿ ಆಲಿಸುತ್ತ ಅವುಗಳ ಹಾರಾಟ ನೋಡಬೇಕೆಂದರೆ ದಾಂಡೇಲಿಯತ್ತ ಹೊರಡಿ. ಹಾರ್ನ್‌ಬಿಲ್‌ಗಳ ಹವಾ ತಿಳಿಯುತ್ತದೆ.

—ಶರಣು ಚಟ್ಟಿ, ವಿಜಯಪುರ

## ಮಕ್ಕಳಿಂದ ವೃಕ್ಷಪೂಜೆ, ವೃಕ್ಷದಾರತಿ

ನಾಲ್ವರು ಮಿತ್ರರು ಜೊತೆಗೂಡಿ ಕಟ್ಟಿದ 'ಭವ್ಯ ಭಾರತಿ' ಸ್ವಯಂ ಸೇವಾ ತಂಡಕ್ಕೀಗ ವರ್ಷದ ಸಂಭ್ರಮ. ಈ ಪ್ರಯುಕ್ತ, ಹೊಸನಗರ ತಾಲ್ಲೂಕಿನ ವಾರಂಬಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 80 ಮಕ್ಕಳಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಿಸಲಾಯಿತು. ಮರವೊಂದರ ಅನುಕೂಲತೆಯ ಬಗ್ಗೆ ಮಕ್ಕಳಿಗೆ ತಿಳಿಸಲಾಯಿತು. ಮರಗಳಿಂದ ಪರಿಸರಕ್ಕೆ, ಜೀವ ಸಂಕುಲಕ್ಕೆ, ಮನುಕುಲಕೆ ಆಗುವ ಉಪಯೋಗದ ಬಗ್ಗೆ ಅರಿವು ಮೂಡಿಸಲಾಯಿತು. ನೂರಾರು ವರ್ಷಗಳ ಮರಗಳ ಸಂರಕ್ಷಣೆ, ಪೋಷಣೆ ಬಗ್ಗೆಯೂ ಅರಿವು ಮೂಡಿಸಲಾಯಿತು. ಹೊಸ ಗಿಡಗಳನ್ನು ನೆಟ್ಟು ಅವು ಮರವನ್ನಾಗಿಸಲು ಹಲವು ವರ್ಷಗಳೇ ಬೇಕು. ಹೀಗಾಗಿ, ಮರಗಳನ್ನು ಕಡಿಯುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಕ್ಕಳಿಗೆ ಸೂಚ್ಯವಾಗಿ ತಿಳಿಸಲಾಯಿತು. ಸಾಂಕೇತಿಕವಾಗಿ ಶಾಲೆಯ ಆವರಣದಲ್ಲಿನ ಹೊನ್ನೆ ಮರಕ್ಕೆ ವೃಕ್ಷಪೂಜೆ ಹಾಗೂ ವೃಕ್ಷದಾರತಿಯನ್ನು ಮಕ್ಕಳಿಂದಲೇ ಮಾಡಿಸಲಾಯಿತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ





## ಗೋಡೆಗೆ ನಾಣ್ಯ ಒತ್ತಿಡುವ ನಂಬಿಕೆ!

ದಾವಲ್ ಮಲಿಕ್ ಪವಾಡ ಪುರುಷನ ದರ್ಗಾ ವಿವಿಧೆಡೆಗಳಲ್ಲಿ ಇದ್ದಂತೆಯೇ... ಗದಗ ಹತ್ತಿರದ ಮುಳಗುಂದ ಗ್ರಾಮದಲ್ಲೂ ಒಂದಿದೆ. ಸಂತ ದಾವಲ್ ಮಲಿಕ್ ಹಜರತ್ ಬುರ್ಹಾನ್ ಶಾ ವಾಲಿಯವರ ಶಿಷ್ಯರಾಗಿದ್ದು, ಅವರ ದರ್ಗಾ ಮುಳಗುಂದ ಬಳಿ ಇರುವ ಬೆಟ್ಟದ ತುದಿಯಲ್ಲಿದೆ. ಇದನ್ನು ದಾವಲ್ ಮಲಿಕ್ ಗುಡ್ಡ ಎಂದು ಕರೆಯಲಾಗುತ್ತದೆ. ಆ ಜಾತಿ ಈ ಜಾತಿ ಎನ್ನದೆ ಬಹುತೇಕ ಅನ್ಯ ಕೋಮಿನ ಮನೆಯ ಹಿರಿಯರು ದಾವಲ್ ಮಲಿಕ್ ಸಂತನ ಅನುಯಾಯಿಗಳು. ದಾವಲ್ ಮಲಿಕ್ ದರ್ಗಾಕ್ಕೆ ಬಾಗಿಲು ಇಲ್ಲ ಎಂದ ಮೇಲೆ ನಮ್ಮ ಮನೆಗಳಿಗೂ ಏಕೆ ಬಾಗಿಲು ಎಂದು ಇಲ್ಲಿನ ನಿವಾಸಿಗಳಿರುವ ಮನೆಗಳಿಗೂ ಬಾಗಿಲುಗಳು ಇಲ್ಲದಿರುವುದು ವಿಶೇಷ. ವಿವಾಹದ ನಂತರ ಗಂಡನ ಮನೆಯವರ ಸಂಪ್ರದಾಯದಂತೆ ದಾವಲ್ ಮಲಿಕ್ ದರ್ಗಾಕ್ಕೆಂದು ಹೋಗಿದ್ದೆ. ದರ್ಗಾ ಹಿಂಬದಿಯ ಗೋಡೆಗೆ ಭಕ್ತಾದಿಗಳು ತಮ್ಮ ಇಷ್ಟಾರ್ಥಗಳ ನೆರವೇರಿಸಿಕೊಳ್ಳಲು ಒಂದು, ಎರಡು ರೂಪಾಯಿ ನಾಣ್ಯವನ್ನು ಕೈಯಲ್ಲಿ ಹಿಡಿದು ಸಂತನನ್ನು ಪ್ರಾರ್ಥಿಸಿ ಗೋಡೆಗೆ ಒತ್ತಿ ಹಿಡಿದು ಪರೀಕ್ಷಿಸುತ್ತಿದ್ದದ್ದನ್ನು ಗಮನಿಸಿದೆ. ಇದರ ಬಗೆಗೆ ದರ್ಗಾದ ಮುಜಾವರ್ ಅವರಲ್ಲಿ ವಿಚಾರಿಸಿದಾಗ, 'ಇಲ್ಲಿಗೆ ಬರುವ ಭಕ್ತಾದಿಗಳ ಇಷ್ಟಾರ್ಥ ಕೈಗೂಡುವುದಿದ್ದರೆ ನಾಣ್ಯವು ಗೋಡೆಗೆ ಅಂಟಿಕೊಳ್ಳುತ್ತದೆ. ಇಷ್ಟಾರ್ಥ ಕೈಗೂಡದಿದ್ದರೆ ನಾಣ್ಯ ಅಂಟಿಕೊಳ್ಳದೆ ಕೆಳಗೆ ಬೀಳುತ್ತದೆ' ಎಂದರು. 'ಗೋಡೆಗೆ ನಾಣ್ಯಗಳಿಂದ ಪರೀಕ್ಷೆ' ಮಾಡುವ ಬಗೆ ತಿಳಿದು ಆಶ್ಚರ್ಯವಾಯ್ತು.

—ಸೌಮ್ಯ ಶಿಗ್ಗಾಂವಕರ್, ದಾವಣಗೆರೆ